ಬೇರೆಡೆಗೆ ಬಿಟ್ಟು ಹೋಗುವ ಸಮಸ್ಯೆ ಇದೆ. ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಯಾವ ಗ್ರಾಮದ ಬಗ್ಗೆ ಹೇಳುತ್ತಾರೋ, ಅದಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಂಡು ಶಾಲೆಗಳ ಮಂಜೂರಾತಿಗೆ ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀ ಶ್ರೀಕಾಂತ ಕುಲಕರ್ಣಿ ಸುಬ್ಬರಾವ್ :- ಈಗಾಗಲೇ ಅಲ್ಲಿರುವ ಜಮೀನು ಸಾಕಷ್ಟು ಜವುಳು-ಸವುಳಿನಿಂದ ಕೂಡಿದೆ. ಅದನ್ನು ತಾವು 21ರವರೆಗೆ ತೆಗೆದುಕೊಳ್ಳುವ ನಿರ್ಣಯ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನೀರು ಹೆಚ್ಚಾದಲ್ಲಿ ಮಹಾರಾಷ್ಟ್ರದಲ್ಲಿ ಯಾವ ತರಹ ಜವುಳು ತೆಗೆಯುವ ಪ್ರಯತ್ನವನ್ನು ಅಲ್ಲಿನ ಸರ್ಕಾರ ಮಾಡಿದೆಯೋ, ಅದೇ ಮಾದರಿಯನ್ನು ಅಭ್ಯಸಿಸುವ ಮೂಲಕ ನೀವು ಕೂಡ ಲಕ್ಷಾಂತರ ಹೆಕ್ಟೇರ್‌ಗಳಷ್ಟು ಜಮೀನನ್ನು ಜವಳು ತೆಗೆಯಬೇಕು. ಇವತ್ತು ಹಿಪ್ಪರಗಿ ಜಲಾಶಯದ ಹಿನ್ನೀರಿನಿಂದ ಇರಬಹುದು, ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಇರಬಹುದು, ಫಲವತ್ತಾದ ಲಕ್ಷಾಂತರ ಹೆಕ್ಟೇರ್‌ಗಳಷ್ಟು ಜಮೀನಿನಲ್ಲಿ ಏನು ಸವುಳು ಉಂಟಾಗಿ ಜಮೀನು ಹಾಳಾಗಿದೆ, ಜಮೀನಿನಲ್ಲಿನ ಸವುಳು-ಜವುಳು ತೆಗೆಯುವ ಸಲುವಾಗಿ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಲ್ಲಿ ಸರಿಯಾಗುತ್ತದೆಂದು ನನಗನಿಸುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ :- ಬರ ಪರಿಹಾರ ಕಾಮಗಾರಿಯಲ್ಲಿ ಸವುಳು-ಜವುಳು ಕಾರ್ಯಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಈ ಭಾಗದಲ್ಲಿ ಈಗಾಗಲೇ ಕಾರ್ಯಕ್ರಮ ಜಾರಿಗೊಳಿಸಿದ್ದೇವೆ. ಅದನ್ನು ಇನ್ನಷ್ಟು ತೀವ್ರಗೊಳಿಸುತ್ತೇವೆ.

10. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮಂಡನೆ :-

ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ) :- “2009ರ ಜನವರಿ 16ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.”

ಶ್ರೀ ಸಿದ್ದು ಸವದಿ (ತೇರದಾಳ) :- ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ :-

ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ) :- ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ 16ನೇ ತಾರೀಖಿನಂದು ಘನತೆವೆತ್ತ ರಾಜ್ಯಪಾಲರು ಎರಡೂ ಸದನಗಳನ್ನು ಉದ್ದೇಶಿಸಿ ಮಾಡಿರುವ ಭಾಷಣದಲ್ಲಿ ಅವರು ಕೊಟ್ಟಿರುವ ವ್ಯವಸ್ಥೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ, ಈ ಸಂದರ್ಭದಲ್ಲಿ ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳಲು ತಮ್ಮ ಅನುಮತಿ ಕೋರುತ್ತಿದ್ದೇನೆ.

ಮೊನ್ನೆ ಚುನಾವಣೆ ನಡೆದ ನಂತರ, ಈ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಕರ್ನಾಟಕದ ಜನತೆ ಅಧಿಕಾರ ಕೊಟ್ಟ ನಂತರ, ಚುನಾವಣಾ ಪೂರ್ವದಲ್ಲಿ ನಮ್ಮ ನಾಯಕರಾದ ಸನ್ಮಾನ್ಯ ಶ್ರೀ ಯಡಿಯೂರಪ್ಪನವರು, ನಮ್ಮ ಸರ್ಕಾರ ಬಂದರೆ ಜನತೆಗೆ ಪ್ರಣಾಳಿಕೆಯಲ್ಲಿ ಏನು ಘೋಷಿಸಿದ್ದೆವು, ಆ ರೀತಿ ಘೋಷಣೆ ಮಾಡಿರುವ ರೀತ್ಯಾ ಶೇಕಡ 60ರಿಂದ 70ರಷ್ಟು ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತಂದಿದ್ದೇವೆ. ಅದರಲ್ಲಿ ಬಹಳ ಪ್ರಮುಖವಾಗಿರುವುದು ಹಾಗೂ ಸಮಸ್ಯೆ ಇರುವುದೇನೆಂದರೆ, ಈ ದಿನ ಮಾನ್ಯ ಸದಸ್ಯರಾದ ಜಯಚಂದ್ರರವರು ಗಣಿ ಉದ್ಯಮದ ಬಗ್ಗೆ ಬಹಳಷ್ಟು ಬೆಳಕು ಚೆಲ್ಲಿದ್ದಾರೆ. ಅವರ ಭಾವನೆ ಇಷ್ಟೆ. ಈ ರಾಜ್ಯದ ಯಾವುದೇ ಒಂದು ಖನಿಜ ಹಾಗೂ ರಾಜ್ಯಕ್ಕೆ ಬರುವ ಸವಲತ್ತು ಏನಿದೆ, ಅದರಿಂದ ರಾಜ್ಯ ವಂಚಿತವಾಗಬಾರದೆಂದು ಅವರು ಭಾವನೆ ವ್ಯಕ್ತಪಡಿಸಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಇದರಲ್ಲಿ ಒಂದೇ ಒಂದು ವಿಷಯವನ್ನು ನಾವು ಗಮನಿಸಬೇಕಾಗುತ್ತದೆ. ಏನೆಂದರೆ, ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ನಂತರ ಗಣಿಗಾರಿಕೆಗೆ ಸಂಬಂಧಿಸಿದಂತೆ ಒಂದೇ ಒಂದು ಮಂಜೂರಾತಿಯನ್ನು ಕೊಟ್ಟಿಲ್ಲ.

(ಈ ಹಂತದಲ್ಲಿ ಶ್ರೀ ಕೆ.ಜೆ.ಬೋಪಯ್ಯ, ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)